ದಿನಾಂಕ 02-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲುಃ**</u> ಪಿರ್ಯಾದುದಾರರ ಪರ ವಕೀಲರಿಂದ,

1) ನಾನು ಪೋಲೀಸ್ ಇಲಾಖೆಯಲ್ಲಿ 16 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಿಪಿ 1 ಚೆಕ್ಕು ಮತ್ತು ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ಪ್ರತ್ಯುತ್ತರದಲ್ಲಿ ನಿಪಿ 1 ಚೆಕ್ಕು ದೂರುದಾರರಿಗೆ ನೀಡಿರುವುದಿಲ್ಲ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ತಿಳಿಸಿರುತ್ತೇನೆ, ಆದರೆ ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ನಾನು ದೂರುದಾರರ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವುದಿಲ್ಲ. ನಿಡಿ 1 ಒಪ್ಪಿಗೆ ಪತ್ರಕ್ಕೆ ಸಾಕ್ಷಿದಾರರು ಸಹಿ ಹಾಕಿರುವುದಿಲ್ಲ. ನಿಡಿ 1 ಒಪ್ಪಿಗೆ ಪತ್ರದಲ್ಲಿ ಇರುವ ಸಹಿ ದೂರುದಾರರದ್ದೇ ಎಂದು ತೋರಿಸಲು ಬೇರೆ ದಾಖಲೆ ಹಾಜರುಪಡಿಸಿರುವುದಿಲ್ಲ. ನಿಡಿ 1 ರಲ್ಲಿ ಸಹಿ ದೂರುದಾರರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2) ನಿಡಿ 1 ಒಪ್ಪಿಗೆ ಪತ್ರವನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿರುವ ಬರವಣಿಗೆ ದೂರುದಾರರು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 2 ದಾಖಲೆಯನ್ನು ನಾನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಂದ ಮೂರು ಲಕ್ಷ ಸಾಲ ಪಡೆದುಕೊಂಡು ಸದರಿ ಸಾಲದ ಭದ್ರತೆಗಾಗಿ ನಿಪಿ 1 ಚೆಕ್ಕು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿ 1 ಚೆಕ್ಕನ್ನು ಸುಭಾಷ್ ಚಂದ್ರ ಜೈನ್ ರವರಿಗೆ ನೀಡಿದ್ದೆ ಎಂದು ನುಡಿಯುತ್ತಾರೆ. ನಾನು ಸುಭಾಷ್ ಚಂದ್ರ ಜೈನ್

ರವರ ವಿರುದ್ಧ ಯಾವುದೇ ದೂರು ದಾಖಲು ಮಾಡಿರುವುದಿಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.